ಕರ್ನಾಟಕ ಸರ್ಕಾರ

# ಜಿಲ್ಲಾ ತರಬೇತಿ ಸಂಸ್ಥೆ , ಚಿತ್ರದುರ್ಗ

## “ಬುನಾದಿ ತರಬೇತಿ”

**ದಿನಾಂಕ: 20.12.2015 & 21.12.2015**

## ‘ಮೂರನೇ ತಂಡ’

## ಕ್ಷೇತ್ರ ಅಧ್ಯಯನ ಭೇಟಿಯ ವರದಿ.

ಸಲ್ಲಿಸಿದೆ : ಸವಿತ.ಪಿ.ವಿ ,
ಪ್ರಾಚಾರ್ಯರು,
ಜಿಲ್ಲಾ ತರಬೇತಿ ಸಂಸ್ಥೆ,
ಚಿತ್ರದುರ್ಗ.

## **:ಪೀಠಿಕೆ:**

## **ಎನ್,ಜಿ,ಓ ಎಂದರೆ ?**

–ಇವುಗಳು ಸರ್ಕಾರೇತರ ಸಂಘ ಸಂಸ್ಥೆಗಳಾಗಿದ್ದು ಸ್ವ ಇಚ್ಚೆಯಿಂದ ರಚಿಸಿದ ಸಂಸ್ಥೆ. ಇವುಗಳಿಗೆ ಇದರದ್ದೇ ಆದ ಗುರಿ, ಯೋಜನೆ, ಅನುಷ್ಠಾನ, ಧ್ಯೇಯ, ಕಾರ್ಯ ವಿಧಾನಗಳನ್ನು ಒಳಗೊಂಡಂತೆ ಇದರ ಜೊತೆಗೆ ಆಡಳಿತಾತ್ಮಕ ಮತ್ತು ಆರ್ಥಿಕ ನಿರ್ವಹಣಾ ಕೌಶಲ್ಯವನ್ನು ಹೊಂದಿರುತ್ತದೆ.

**ಕಾರ್ಯ ಚೌಕಟ್ಟು :**

- ಆರೋಗ್ಯ ಮತ್ತು ಶಿಕ್ಷಣ.
- ಶಿಕ್ಷಣ ಮಾಹಿತಿ ಮಾಧ್ಯಮ.
- ಪೌಷ್ಠಿಕ ಆಹಾರದ ಜಾಗೃತಿ.
- ಮಾಲಿನ್ಯ ನಿರ್ಮೂಲನೆ.
- ಜಲ ಸಂಪನ್ಮೂಲದ ಸದುಪಯೋಗ.
- ಹೆಚ್.ಐ.ವಿ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವುದು.
- ಮಾದಕ ವಸ್ತುಗಳ ಸೇವನೆ ಬಗ್ಗೆ ಜಾಗೃತಿ.
- ಅನಕ್ಷರಸ್ಥರಿಗೆ ಅಕ್ಷರ ಜ್ಞಾನ.

**2. ಸಾಮಾಜಿಕ ಜಾಗೃತಿ :**

- ಬಾಲ ಕಾರ್ಮಿಕರ ನಿಷೇಧ.
- ಹೆಣ್ಣು ಮಕ್ಕಳಿಗೆ ಉನ್ನತ ಶಿಕ್ಷಣದ ಬಗ್ಗೆ ಜಾಗೃತಿ.
- ಬಾಲ್ಯ ವಿವಾಹದ ಬಗ್ಗೆ ಜನರಲ್ಲಿ ಅರಿವು ಮೂಡಿಸುವುದು.

**3. ಆರ್ಥಿಕ :**

- ಕಿರು ಸಾಲ ಯೋಜನೆ.
- ಕೌಶಲ್ಯ ತರಬೇತಿ.

- ಸ್ವಯಂ ಉದ್ಯೋಗ ತರಬೇತಿ ಮತ್ತು ಪ್ರೋತ್ಸಾಹ.
- ಹಣ ಕಾಸಿನ ವ್ಯವಹಾರದ ಬಗ್ಗೆ ಅರಿವು.

**4. ಮಹಿಳಾ ಸಮಸ್ಯೆಗಳು :**

- ಮಹಿಳೆ ಮತ್ತು ಮಕ್ಕಳ ಹಕ್ಕಿನ ಬಗ್ಗೆ ಅರಿವು.
- ಸಂತ್ರಸ್ಥ ಮಹಿಳೆಯರಿಗೆ ಆಶ್ರಯ ವ್ಯವಸ್ಥೆ.
- ಸಂಪ್ರದಾಯ ಮತ್ತು ಮೂಢ ನಂಬಿಕೆಗಳ ಬಗ್ಗೆ ಅರಿವು ಮತ್ತು ಸ್ತ್ರೀ ಸಹಾಯ ವಾಣಿ.

**5. ಎನ್.ಜಿ.ಓ ಉದ್ಭವಿಸಲು ಕಾರಣ :**

- ಸಮಸ್ಯೆಗಳ ಬಗ್ಗೆ ಹುಡುಕಾಟ ನಡೆಸಲು.
- ಸಮಸ್ಯೆಗಳ ಕಾರಣ.
- ಸಮಸ್ಯೆಗಳಿಗೆ ಸಾಧ್ಯವಾಗುವಂತಹ ಪರಿಹಾರ.
- ಜನರ ಪ್ರತಿಕ್ರಿಯೆಗಳನ್ನು ಒಗ್ಗೂಡಿಸುವುದು.
- ಜನರಲ್ಲಿ ಅರಿವು ಮೂಡಿಸುವುದು.
- ಮಾಧ್ಯಮಗಳ ಸದುಪಯೋಗ ಮತ್ತು ಬಳಕೆ.

**6. ಎನ್.ಜಿ.ಓ ಕಾರ್ಯ ವಿಧಾನ :**

- ಸಮೂಹ ಸಂಪನ್ಮೂಲ ವ್ಯಕ್ತಿಗಳ ಕೇಂದ್ರೀಕರಣ.
- ಉದ್ದೇಶ ಮತ್ತು ಗುರಿಗಳ ರಚನೆ.
- ಸಾಮಾಜಿಕ ಆಡಳಿತದ ಮಾಹಿತಿ.
- ಸಮಸ್ಯೆಗಳ ಪಟ್ಟಿ ಮತ್ತು ಪರಿಹಾರ.
- ಹಣಕಾಸಿನ ನಿರ್ವಹಣೆ.
- ಆಡಳಿತಾತ್ಮಕ ನಿರ್ವಹಣೆ.
- ಬೇರೆ ಎನ್.ಜಿ.ಓಗಳ ಜೊತೆ ಸಂಪರ್ಕ ಜಾಲ.

## -: ಕ್ಷೇತ್ರ ಅಧ್ಯಯನ ಸಭೆ :-

ಜಿಲ್ಲಾ ತರಬೇತಿ ಸಂಸ್ಥೆ ಚಿತ್ರದುರ್ಗ ವತಿಯಿಂದ ಏರ್ಪಡಿಸಲಾದ ಸ್ವಯಂ ಸೇವಾ ಸಂಸ್ಥೆಗೆ ದಿನಾಂಕ–20/12/2015 ರಂದು ಬುನಾದಿ ತರಬೇತಿಯ ತಂಡ ಚಿತ್ರದುರ್ಗ (ಜಿ) ಚಳ್ಳಕೆರೆ (ತಾ) ನಾಯಕನಹಟ್ಟಿ ಗ್ರಾಮಕ್ಕೆ ಭೇಟಿ ನೀಡಿದ ಸಂದರ್ಭ ಅಲ್ಲಿನ ಸಮುದಾಯ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ **ಮಾನುಷ್** ಸಂಸ್ಥೆಯ ವ್ಯವಸ್ಥಾಪಕರಾದ ಶ್ರೀ ಸುರೇಶ್ ರವರು ನೀಡಿದ ಮಾಹಿತಿಯಂತೆ **ಮಾನುಷ್** ಈ ಸಂಸ್ಥೆಯು 4 ವಿಭಾಗದಲ್ಲಿ ಪ್ರಾರಂಭವಾಗಿದೆ ಕರ್ನಾಟಕ, ಕೇರಳ, ಆಂಧ್ರ ಪ್ರದೇಶ, ತಮಿಳುನಾಡು ಇಲ್ಲಿ 168 ಸಂಘ ಸಂಸ್ಥೆಗಳು ಕಾರ್ಯ ನಿರ್ವಹಿಸುತ್ತಿದೆ. ಕರ್ನಾಟಕದಲ್ಲಿ 1995 ರಲ್ಲಿ ಆಗಿದ್ದು ಇದರ ಕೇಂದ್ರ ಕಛೇರಿ ಬೆಂಗಳೂರಿನಲ್ಲಿದ್ದು, ಜಿಲ್ಲಾ ಕಛೇರಿ ಚಿತ್ರದುರ್ಗದಲ್ಲಿ ಮತ್ತು ತಾಲ್ಲೂಕು ಕಛೇರಿ ಚಳ್ಳಕೆರೆಯಲ್ಲಿದೆ..ನಾಯಕನಹಟ್ಟಿ ಕ್ಷೇತ್ರದಲ್ಲಿ 96 ಸ್ವ ಸಹಾಯ ಸಂಘಗಳು ಕಾರ್ಯ ನಿರ್ವಹಿಸುತ್ತಿದೆ.



- **ಮಾನುಷ್ ಸಂಸ್ಥೆಯ ಆಡಳಿತಾತ್ಮಕ ರಚನೆ.**

- ವ್ಯವಸ್ಥಾಪಕರು.
- ಸಿ,ಎಂ,ಆರ್,ಸಿ ಸಹಾಯಕರು.
- ಕಾರ್ಯಕರ್ತರು.

- ಪ್ರಾಜೆಕ್ಟ್ ಮೆಂಬರ್ಸ್.

- **ಮಾನುಷ್ ಸಂಸ್ಥೆಯ ಕಾರ್ಯ ಕ್ಷೇತ್ರ**
    - ಸ್ವ ಸಹಾಯ ಸಂಘಗಳ ಕಾರ್ಯ.
    - ಆರೋಗ್ಯದ ಅರಿವು ಕಾರ್ಯಕ್ರಮ.
    - ಸ್ವಯಂ ಉದ್ಯೋಗ ತರಬೇತಿ.
    - ಉದ್ಯೋಗ ಮೇಳದ ಚಟುವಟಿಕೆ.
    - ಇಲಾಖಾವಾರು ಸಾಲ ಸಂಪರ್ಕ ಮಾಹಿತಿ ಮತ್ತು ನೆರವಿನ ಮಾಹಿತಿ ಚಟುವಟಿಕೆ.
    - ಜಿಲ್ಲಾ ಪಂಚಾಯ್ತಿ, ತಾಲ್ಲೂಕು ಪಂಚಾಯ್ತಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಮತ್ತು ಕಾರ್ಪೋರೇಶನ್‌ಗಳ ಜೊತೆ ಸಂಪರ್ಕ.
    - ನಿರುದ್ಯೋಗ ನಿರ್ಮೂಲನಾ ಕಾರ್ಯಕ್ರಮ.
    - ಸ್ವಚ್ಚತಾ ಕಾರ್ಯಕ್ರಮ.

- **ಮಾನುಷ್ ಸಂಸ್ಥೆಯ ಕಾರ್ಯ ಚಟುವಟಿಕೆಗಳು**

    - ಕ್ರಮಬದ್ಧವಾಗಿ ಸಭೆಗಳನ್ನು ನಡೆಸುವುದು.
    - ಪ್ರತಿ ತಿಂಗಳ ಸ್ವ ಸಹಾಯ ಗುಂಪುಗಳ ಪ್ರಗತಿ ಪರಿಶೀಲನೆ.
    - ಸ್ವ ಸಹಾಯ ಗುಂಪುಗಳ ಸಾಲದ ಬೇಡಿಕೆ ಪರಿಶೀಲನೆ.
    - ಗುಂಪುಗಳಲ್ಲಿರುವ ಸಮಸ್ಯೆಗಳ ಬಗ್ಗೆ ಚರ್ಚೆ ಪರಿಹಾರ.
    - ಗುಂಪುಗಳಿಗಿರುವ ಅವಶ್ಯಕವಾದ ತರಬೇತಿಗಳ ಬಗ್ಗೆ ಚರ್ಚೆ ಹಾಗೂ ಸಂಘಟನೆ.
    - ಸಾಮಾಜಿಕ ಪಿಡುಗುಗಳ ಬಗ್ಗೆ ಚರ್ಚೆ, ಇದರ ಬಗ್ಗೆ ಹೋರಾಡಲು ವೇದಿಕೆಯ ತಯಾರಿಕೆ,ಸಿದ್ದತೆ.
    - ಗ್ರಾಮ ಮಟ್ಟದ ಸಮಸ್ಯೆಗಳಿಗೆ ಗುಣಾತ್ಮಕವಾಗಿ ಸ್ಪಂದಿಸುವುದು.

- **ಮಾಸಿಕ ಸಭೆಯ ಕಾರ್ಯಕ್ರಮ**
    - ಗೊತ್ತಾದ ಜಾಗದಲ್ಲಿ ನಿಗದಿತ ಸಮಯಕ್ಕೆ ಸರಿಯಾಗಿ ಸಭೆ ನಡೆಸುವುದು.
    - ಗುಂಪುಗಳ ಪರಿಕಲ್ಪನೆಯಂತೆ ನಡೆಸುವುದು.
    - ಸ್ವ ಸಹಾಯ ಗುಂಪುಗಳ ಪ್ರಗತಿ ಪರಿಶೀಲನೆ.
    - ಸಂಪನ್ಮೂಲಗಳ ಕ್ರೂಢೀಕರಣ.

➢ **<u>ಸ್ವ ಸಹಾಯ ಸಂಘಗಳ ಪರಿವೀಕ್ಷಣೆ ಮಾಹಿತಿ</u>**

- ಮಹಾಲಕ್ಷ್ಮಿ ಸ್ವ ಸಹಾಯ ಸಂಘ.
- ತುಂಗಾ ಸ್ವ ಸಹಾಯ ಸಂಘ.
- ಸರಸ್ವತಿ ಸ್ವ ಸಹಾಯ ಸಂಘ.
- ಶಾರದಾ ಸ್ವ ಸಹಾಯ ಸಂಘ.
- ಆಂಜನೇಯ ಸ್ವ ಸಹಾಯ ಸಂಘ.
- ತಿಪ್ಪೇರುದ್ರ ಸ್ವಾಮಿ ಸ್ವ ಸಹಾಯ ಸಂಘ.
- ಶ್ರೀ ವಿಶ್ವ ಮಹಿಳಾ ಸ್ವ ಸಹಾಯ ಸಂಘ.
- ಕಾಮಧೇನು ಸ್ವ ಸಹಾಯ ಸಂಘ.



**<u>ಸ್ವಸಹಾಯ ಸಂಘ :</u>**

ಸಮಾನ ಆಸಕ್ತಿ ಇರುವ 15–20 ಬಡ ಸಾಮಾನ್ಯ ಜನರು ತಮ್ಮ ಸಾಮಾಜಿಕ ಆರ್ಥಿಕ ಅಭಿವೃದ್ಧಿಗಾಗಿ ಹಾಗೂ ಸಮಸ್ಯೆಗಳನ್ನು ಒಂದು ನಿರ್ಧಿಷ್ಟ ಜಾಗ ವೇಳೆಗೆ ಸೇರಿ ಸಹ ಭಾಗಿತ್ವದಲ್ಲಿ ಚರ್ಚಿಸಿ ಸರಿಯಾದ ತೀರ್ಮಾನಗಳನ್ನು ತಮ್ಮದೇ ಆದ ಸ್ವಂತ ಬಂಡವಾಳ ಹೂಡಿ ಪರಸ್ಪರ ಹಾಗೂ ಸಮಾಜದ ಸಹಾಯ ಮಾಡುವ ಗುಂಪನ್ನು ಸ್ವ ಸಹಾಯ ಎಂದು ಕರೆಯಬಹುದು.



**ಸ್ವ ಸಹಾಯ ಸಂಘದ ಸಭೆಯ ಮಾದರಿ ;**

- ನಿಗದಿತ ಸಮಯಕ್ಕೆ ಸೇರುವುದು .
- ಸಾಮಾಹಿಕವಾಗಿ ಪ್ರಾರ್ಥನೆ .
- ವೃತ್ತಾಕಾರದಲ್ಲಿ ಕುಳಿತುಕೊಳ್ಳುವುದು .
- ಸಭಾಧ್ಯಕ್ಷರ ಆಯ್ಕೆ ಮಾಡುವುದು .
- ಹಣಕಾಸಿನ ವ್ಯವಹಾರ ಮಾಡುವುದು.
- ಚರ್ಚೆ ತೀರ್ಮಾನ ಮಾಡುವುದು.
- ವಂದನಾರ್ಪಣೆ ಸಹಿಯೊಂದಿಗೆ ಸಭೆ ಮುಕ್ತಾಯ.

**ಮಹಿಳಾ ಸ್ವ – ಸಹಾಯ ಸಂಘಗಳ ಒಕ್ಕೂಟ;**

*15 ರಿಂದ 20 ಸ್ವ ಸಹಾಯ ಸಂಘಗಳು ಒಂದೆಡೆ ಸೇರಿಕೊಂಡು ತಮ್ಮ ಸದಸ್ಯ ಸಂಘಗಳು ನಿರಂತರವಾಗಿ ನಡೆಯಲು ಮತ್ತು ಬಲವರ್ಧನೆಗೆ ರಚಿಸಿದ ವ್ಯವಸ್ಥೆಯ ಒಕ್ಕೂಟ. ಕಾರಣ ಸದಸ್ಯ ಸಂಘಗಳ ನಿರಂತರತೆಯನ್ನು ಕಾಪಾಡುವುದು ಮತ್ತು ಬಲವರ್ಧನೆ ಮಾಡುವುದು.

## " ಸ್ವ-ಸಹಾಯ ಪದ್ಧತಿ – ಜೀವನದ ಉನ್ನತಿ"

**ಸ್ವ-ಸಹಾಯ ಸಂಘ :**

ಸ್ವ ಸಹಾಯ ಸಂಘದ ಪ್ರತಿನಿಧಿ ಕಾರ್ಯ :

- ಪ್ರತಿ ಸಂಘದಲ್ಲಿ ಆಯ್ಕೆಗೊಂಡ ಇಬ್ಬರು ಪ್ರತಿನಿಧಿಗಳು ಇರುತ್ತಾರೆ.



**ಇವರ ಕಾರ್ಯ :**

- ಸದಸ್ಯ ಸಂಘಗಳ ಬಲವರ್ಧನೆ ಮತ್ತು ಹೊಸ ಸಂಘಗಳ ರಚನೆ.
- ತಿಂಗಳ ಸಭೆಯಲ್ಲಿ ಸಂಘಗಳ ಆರ್ಥಿಕ ಮತ್ತು ಮಾಹಿತಿಗಳ ಸಂಗ್ರಹಣೆ ಮಾಡುವುದರೊಂದಿಗೆ ನಿರ್ವಹಣೆ.
- ಸರ್ಕಾರಿ ಇನ್ನಿತರೆ ಸಂಸ್ಥೆಗಳ ಸೇವೆ ಹಾಗೂ ಸೌಲಭ್ಯ ಕಾರ್ಯಕ್ರಮಗಳ ಮಾಹಿತಿ ನೀಡುವುದು.
- ಬ್ಯಾಂಕ್ ಮತ್ತಿತರೆ ಹಣ ಕಾಸು ಸಂಸ್ಥೆಗಳೊಂದಿಗೆ ಸಂಬಂಧ ಮತ್ತು ಸಂಪರ್ಕ.
- ಸದಸ್ಯ ಸ್ವ ಸಹಾಯ ಸಂಘಗಳ ಸಾಮರ್ಥ್ಯಾಭಿವೃದ್ಧಿ.
- ಸಂಘಗಳಿಗೆ ಲೆಕ್ಕ ಪುಸ್ತಕ ಹಾಗೂ ದಾಖಲಾತಿ ನಿರ್ವಹಣೆ ಮಾಡಲು ಸಹಾಯ.
- ನಿಗಧಿತ ಅವಧಿಗಳಲ್ಲಿ ಲೆಕ್ಕ ಪರಿಶೋಧನೆ.

**ಸ್ವ ಸಹಾಯ ಸಂಘಗಳ ಗುಣಲಕ್ಷಣಗಳು :**

- ಸ್ವ ಇಚ್ಛೆಯುಳ್ಳವರು.
- ಪರಸ್ಪರ ಸಹಾಯ ಸಹಭಾಗಿತ್ವ.
- ರಾಜಕೀಯ ರಹಿತ.
- ಪ್ರಜಾ ಪ್ರಭುತ್ವದ ನೀತಿ.
- ಪರಸ್ಪರ ಬಾಂಧವ್ಯ.

**ಸ್ವಸಹಾಯದ ಗುರಿ :**

- ಸದಸ್ಯರ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿ..
- ಗ್ರಾಮ ಹಾಗೂ ಪರಿಸರದ ಅಭಿವೃದ್ಧಿ ಮಾಡುವುದು.

**ಸ್ವ ಸಹಾಯದ ಉದ್ದೇಶ :**

- ಉಳಿತಾಯ ಮಾಡುವುದು.
- ಸಾಲ ಚಟುವಟಿಕೆಗಳು.
- ಸಮುದಾಯ ಕಾರ್ಯಕ್ರಮಗಳು.

**ಸ್ವ ಸಹಾಯದ ರಚನೆ :**

- ಎಲ್ಲರೂ ಬಡವರಿರಬೇಕು.
- 15–20 ಜನ ಬಡ ಜನರು.
- ಇಬ್ಬರು ಪ್ರತಿನಿಧಿಗಳು.
- ಸಂಘಕ್ಕೊಂದು ಹೆಸರು.
- ಸಂಘದ ಹೆಸರಿನಲ್ಲಿ ಬ್ಯಾಂಕ್ ಖಾತೆ.
- ತಮ್ಮದೇ ಆದ ನಿಯಮ ನಿಬಂಧನೆಗಳು.
- ವಾರಕ್ಕೊಂದು ಸಭೆ.
- ಅಗತ್ಯ ಪುಸ್ತಕ.

**ಆದರ್ಶ ಮಹಿಳಾ ಸ್ವ–ಸಹಾಯ ಸಂಘದ ಗುಣಲಕ್ಷಣಗಳು :–**

- ಸಂಘವು ಒಳ್ಳೆಯ ದೂರ ದೃಷ್ಟಿ ಗುರಿ ಮತ್ತು ಉದ್ದೇಶಗಳನ್ನು ಹೊಂದಿರಬೇಕು.
- ಸಂಘವು 15–20 ಸದಸ್ಯರನ್ನು ಮಾತ್ರ ಹೊಂದಿರಬೇಕು .
- ನಿಗದಿತ ಸಮಯದ ಸಭೆ.
- ನಿಗದಿತ ಉಳಿತಾಯ.
- ಸಾಲಗಳ ನಿರ್ವಹಣೆ.
- ಸಂಘದ ಕಾನೂನು ನಿಯಮಗಳನ್ನು ಪಾಲಿಸುವುದು .
- ಸದಸ್ಯರು ಅದಷ್ಟು ಸರ್ಕಾರಿ ಕಾರ್ಯಕ್ರಮಗಳಿಗೆ ಪಡೆಯುವಲ್ಲಿ ಯಶಸ್ವಿ ಇರಬೇಕು .
- ಬ್ಯಾಂಕುಗಳಿಂದ ಸಂಘಕ್ಕೆ ಸಾಲಗಳು ದೊರೆಯುತ್ತಿರಬೇಕು .
- ಸಂಘದ ದಾಖಲಾತಿಗಳನ್ನು ಸರಿಯಾಗಿ ಇಟ್ಟಿರಬೇಕು.
- ಸ್ಥಳೀಯ ಸಂಪನ್ಮೂಲಗಳನ್ನು ಕ್ರೋಡಿಕರಿಸಬೇಕು.

## ➢ **<u>ಸ್ವ-ಸಹಾಯ ಸಂಘದ ಇತರೆ ಕಾರ್ಯಗಳು :-</u>**

- ಭಾಗ್ಯಲಕ್ಷ್ಮಿ ಕಾರ್ಯಕ್ರಮ ಚಟುವಟಿಕೆ.
- ಗಿಡ ನೆಡುವ ಕಾರ್ಯಕ್ರಮ.
- ನೀರು, ಮಜ್ಜಿಗೆ ವಿತರಣಾ ಕಾರ್ಯಕ್ರಮ.
- ಸ್ವಚ್ಛತಾ ಕಾರ್ಯಕ್ರಮ.
- ಶಿಕ್ಷಣ ಪ್ರೋತ್ಸಾಹ.
- ಉತ್ತಮ ಪರಿಸರ ಅಭಿವೃದ್ಧಿ.
- ಉದ್ಯೋಗ ಮೇಳದ ಚಟುವಟಿಕೆ.
- ಸಾಲ ಸಂಪರ್ಕ ಹಾಗೂ ಪ್ರೋತ್ಸಾಹ ಧನ ಸಂಪರ್ಕ.
- ಸ್ಥಳೀಯ ಟೆಂಟ್ ಶಾಲೆ.
- ಗ್ರಾಮದ ಉಜ್ವಲಕ್ಕೆ ಶ್ರಮಿಸುವುದು.
- ಪಿಂಚಣಿ ಕಾರ್ಯಕ್ರಮದ ಅರಿವು ಮೂಡಿಸುವುದು.

## ➢ **<u>ಸ್ವ-ಸಹಾಯ ಸಂಘದಲ್ಲಿ ಸಾಲದಿಂದ ಪಡೆದ ಸೌಲಭ್ಯಗಳು :-</u>**

- ವ್ಯಾಪಾರ .
- ಕುರಿ ಸಾಕಾಣಿಕೆ.
- ಆರ್ಥಿಕ ಭದ್ರತೆ.
- ಸಂಘದ ಸದಸ್ಯರ ವೈಯಕ್ತಿಕ ತೊಂದರೆಗೆ ಆರ್ಥಿಕ ಸಹಾಯ.
- ವ್ಯವಸಾಯಕ್ಕೆ ಅನುಕೂಲ.
- ಟೈಲರಿಂಗ್.
- ಸ್ವಯಂ ಉದ್ಯೋಗಕ್ಕೆ ಆರ್ಥಿಕ ನೆರವು (ಮಹಿಳೆಯರಿಗೆ).
- ಉನ್ನತ ಶಿಕ್ಷಣಕ್ಕೆ ಪ್ರೋತ್ಸಾಹ.
- ಶೈಕ್ಷಣಿಕ ಪ್ರೋತ್ಸಾಹ.



## ಅನಿಸಿಕೆಗಳು

- ಸಂಘದ ಸದಸ್ಯರ ಪ್ರತಿಭಾನ್ವಿತ ಮಕ್ಕಳಿಗೆ ಸಂಘದ ವತಿಯಿಂದ ಪ್ರೋತ್ಸಾಹ ಧನ ಕೊಡುವ ವ್ಯವಸ್ಥೆ ಮಾಡುವುದು.
- ಎಲ್ಲಾ ಕಡೆಯು ಮಹಿಳಾ ಸಂಘಗಳು ಇರುವುದರಿಂದ ಪುರುಷ ಸಂಘವನ್ನು ಸ್ಥಾಪಿಸುವುದು ಉತ್ತಮ.
- ಗ್ರಾಮ ಮಟ್ಟದಲ್ಲಿರುವ ಸಂಘಗಳು ಸಮಾಜಕ್ಕೆ ಮಾದರಿಯಾಗುವ ರೀತಿಯಲ್ಲಿ ಬೆಳೆಸಬೇಕು ಅಥವಾ ಕೆಲಸ ಕಾರ್ಯ ನಿರ್ವಹಿಸಬೇಕು.
- ಚಾರಿಟಿ ಟ್ರಸ್ಟ್‌ಗಳ ಜೊತೆ ಒಗ್ಗೂಡುವುದು ಉತ್ತಮ.
- ಸರ್ಕಾರದ ಜೊತೆ ನೇರ ಸಂಪರ್ಕ ಮತ್ತು ಚರ್ಚೆಯಲ್ಲಿ ಭಾಗವಹಿಸುವುದು ಉತ್ತಮ.
- ಸಮೂಹ ಮಾಧ್ಯಮಗಳ ಜೊತೆ ನೇರ ಸಂಪರ್ಕ.
- ಸಮಾಜಘಾತುಕ ಚಟುವಟಿಕೆಗಳ ವಿರುದ್ಧ ಹೋರಾಡಲು ಸಂಘ ಸಂಸ್ಥೆಗಳು ಮುಂದಾಗಬೇಕು.

## -:ಪ್ರಶಿಕ್ಷಣಾರ್ಥಿಗಳ ಅಭಿಪ್ರಾಯ:-

ಈ ಬುನಾದಿ ತರಬೇತಿಯಲ್ಲಿ ನೀಡಲಾದ ಕ್ಷೇತ್ರ ಅಧ್ಯಯನ ಕಾರ್ಯಕ್ರಮದಿಂದ ನಮಗಾದ ಅನುಭವ:-

- ಎನ್.ಜಿ.ಓ ಸಂಸ್ಥೆಗಳ ಸಂಪೂರ್ಣ ಚಿತ್ರಣ ದೊರೆಯಿತು.
- ಅವುಗಳ ಕಾರ್ಯ ವಿಧಾನ ಮತ್ತು ಕ್ಷೇತ್ರದ ಪರಿಚಯವಾಯಿತು.
- ಸ್ವ ಸಹಾಯ ಸಂಘಗಳಿಂದ ಗ್ರಾಮಗಳ ಆರ್ಥಿಕ ಮತ್ತು ಸಾಮಾಜಿಕ ವ್ಯವಸ್ಥೆ ಸುಧಾರಿಸುತ್ತಿದೆ.
- ಸ್ವ ಸಹಾಯ ಸಂಘಗಳಿಂದ ಮಹಿಳಾ ಸಬಲೀಕರಣವಾಗುತ್ತಿದೆ.
- ಮಹಿಳೆಯರಿಗೆ ಸ್ವಯಂ ಉದ್ಯೋಗಕ್ಕೆ ಪ್ರೋತ್ಸಾಹ ದೊರಕುತ್ತಿದೆ.
- ಗ್ರಾಮಗಳು ಸಾಕ್ಷರತೆ ಕಡೆಗೆ ಸಾಗುತ್ತಿದೆ.
- ಇಂತಹ ಕಾರ್ಯಕ್ರಮಗಳಿಂದ ಸಾಮಾಜಿಕ ಒಮ್ಮತ ವೃದ್ಧಿಯಾಗುತ್ತದೆ.
- ನಮಗಾಗಿ ಇಂತಹ ಕಾರ್ಯಾನ್ಮುಕಿ ತರಬೇತಿ ಆಯೋಜಿಸಿದ ತರಬೇತಿ ಸಂಸ್ಥೆಗೆ ನಮ್ಮ ಧನ್ಯವಾದಗಳು.

## ಉಪ ಸಂಹಾರ

ಎನ್.ಜಿ.ಓ ಗಳು ಜನ ಸಾಮಾನ್ಯರ ಭಾವನೆಗಳಿಗೆ ಹತ್ತಿರದಲ್ಲಿದ್ದಾರೆ. ಹಾಗೆಯೇ ಸರ್ಕಾರಕ್ಕಿಂತ ಹೆಚ್ಚಿನ ಸ್ನೇಹ ಸಂಪರ್ಕ ಜನರೊಂದಿಗೆ ಹೊಂದಿರುತ್ತಾರೆ. ಎನ್.ಜಿ.ಓ ಗಳು ಸಮಾಜದಲ್ಲಿ ಜನಪ್ರಿಯತೆ ಹೊಂದುತ್ತಿದೆ. ಸರ್ಕಾರದ ಕಾರ್ಯಕ್ರಮದ ಮಾಹಿತಿಯನ್ನು ಜನರ ಕಡೆಗೆ ಸಾಗಿಸಲು ಸಂಪರ್ಕ ಮಾರ್ಗವಾಗಿ ಎನ್.ಜಿ.ಓ ಗಳು ಕಾರ್ಯ ನಿರ್ವಹಿಸುತ್ತಿವೆ. ಈ ಸಂಸ್ಥೆಯು ರಾಜಕಾರಣ ರಹಿತವಾಗಿರುವುದರಿಂದ ಇದರ ಗುಣಮಟ್ಟ ಉನ್ನತ ಮಟ್ಟದಲ್ಲಿದೆ. ಈ ಸಂಸ್ಥೆಯು ಪಾರದರ್ಶಕತೆಗೆ ಹೆಚ್ಚು ಹೊತ್ತು ಕೊಡುತ್ತಿದೆ. ಹಾಗೆಯೇ ಪ್ರಜಾಪ್ರಭುತ್ವಕ್ಕೆ ಹೆಚ್ಚು ಪ್ರಾಮುಖ್ಯತೆ ನೀಡಿದೆ.